# ಟವೆಲ್ ಸಿಗದೇ ಹೋದಾಗ...

'ಸುಬ್ಬಯ್ಯನವರ ಮಗಳೆಂದರೆ ತಮಾಷೆಯಾ' ಎಂದು ಸಣ್ಣದೊಂದು ಗುಂಪು ಕಿಚಾಯಿಸುವಷ್ಟರ ಹೊತ್ತಿಗೆ, ಈ ಉದ್ಗಾರ ತನ್ನನ್ನು ಕುರಿತೇ ಹೊರಟಿದ್ದು ಎಂದು ಅರ್ಥ ಮಾಡಿಕೊಂಡ ನಟಿಯ ಕೆನ್ನೆಯಷ್ಟೇ ಅಲ್ಲದೆ ಮೂಗೂ ಕೆಂಪಾಗಿತ್ತು.

ವಿಷಯ ಸರಳ ಆಗಿರಲಿಲ್ಲ. ವಿದೇಶದ ಕೃತಕ ಬೀಚ್. ಅಲ್ಲಿ ಪದೇ ಪದೇ ನಾಯಕನ ಜೊತೆ ಕ್ಯಾಮೆರಾಗೆ ಕಾಣಿಸಿಕೊಂಡು, ಹೊರಬರುವುದೇ ಸಂಕೀರ್ಣ ಸಂಗತಿ. ಅದಕ್ಕೆ ನಟಿಯನ್ನು ಒಪ್ಪಿಸಲು ನಿರ್ದೇಶಕರು ಒಂದಿಷ್ಟು ಬುದ್ಧಿ ಖರ್ಚು ಮಾಡಿ ಆಗಿತ್ತು. ಈಜುಡುಗೆ ಈ ಕಾಲಕ್ಕೆ ವರ್ಜ್ಯ ಅಲ್ಲವಲ್ಲ. ತೊಟ್ಟು ನೀರಿಗಿಳಿಯಲು ಆ ನಟಿಯೂ ಒಪ್ಪಿದರು. ಅದಕ್ಕೆ ತಂದೆಯ ಅನುಮತಿಯೂ ಸಿಕ್ಕಿತ್ತು. ಕೃತಕ ಬೀಚ್‌ನ ನೀರು ಶುದ್ಧವಾಗಿದೆಯಷ್ಟೆ ಎನ್ನುವುದನ್ನು ಮೊದಲು ಖಚಿತಪಡಿಸಿಕೊಂಡರು. ಕ್ಯಾಮೆರಾ ಕಣ್ಣು ತನ್ನ ಹದ್ದುಮೀರಕೂಡದು ಎಂದು ತಾಕೀತು ಮಾಡಲು ಮರೆಯಲಿಲ್ಲ. ಕೊನೆಗೂ ಚಿತ್ರೀಕರಣಕ್ಕೆ ನಟಿ ಅಣಿಯಾದದ್ದು ಒಂದು ಸುದೀರ್ಘ ಪ್ರಬಂಧಕ್ಕೆ ವಸ್ತುವಾದೀತು. ಇದನ್ನು ಸಣ್ಣ ಪೀಠಿಕೆ ಎಂದು ಓದಿಕೊಳ್ಳಬೇಕು. ಅಸಲಿ ವಿಷಯ ಇರುವುದು ಮುಂದೆ...

'ಸ್ಟಾರ್ಟ್ ಕ್ಯಾಮೆರಾ... ಆ್ಯಕ್ಷನ್' ಎಂದಮೇಲೆ ಅಲ್ಲಿದ್ದ ಚಿತ್ರತಂಡದ ಬೆರಳೆಣಿಕೆಯಷ್ಟು ಜನ ಜಾಗರೂಕರಾದರು. 'ನೀರಿನಲ್ಲಿ ಅಲೆಯ ಉಂಗುರ. ನಾಯಕ, ನಾಯಕಿಯ ಶಾಟ್ ಸುಮಧುರ' ಎಂದುಕೊಂಡರು. ನಿರ್ದೇಶಕರಿಗೆ ಮೊದಲ ಸಮಾಧಾನ. 'ಕಟ್' ಹೇಳಿದಾಗಲೂ ಅವರು ಹಸನ್ಮುಖಿಯಾಗಿಯೇ ಇದ್ದರು. ನೀರಿನಿಂದ ಧಿಗ್ಗನೆದ್ದು ಹೊರಗೆ ಬಂದ ನಾಯಕಿ ಕೈಚಾಚಿದರು. ಅವರು ಬಯಸಿದ ಟವೆಲ್ ತಕ್ಷಣಕ್ಕೆ ಸಿಗಲಿಲ್ಲ. ಅದು ಸಿಗಲು ಕೆಲವು ಸೆಕೆಂಡುಗಳೇ ಬೇಕಾದವು. ನೀರಿನಿಂದ ಆಗಷ್ಟೇ ಎದ್ದು ಬಂದಿದ್ದರೂ ಅವರು ಕೋಪದಿಂದ ಕುದಿಯುತ್ತಿದ್ದರು. ನಿರ್ದೇಶಕರ ಮುಖಭಾವ ಸಹಜವಾಗಿಯೇ ಬದಲಾಯಿತು. ಮತ್ತೊಮ್ಮೆ ನೀರಿಗಿಳಿಯಲು ನಾಯಕಿ ಹಿಂದುಮುಂದು ನೋಡಲು ಇದಕ್ಕಿಂತ ಇನ್ನೇನು ಕಾರಣ ಬೇಕು? ಮತ್ತೆ ನಿರ್ದೇಶಕರು ಬುದ್ಧಿ ಖರ್ಚು ಮಾಡಿದರು. ನಾಯಕ ಸಿನಿಮಾ ಮೇಲೆ ಬಂಡವಾಳವನ್ನೂ ಹಾಕಿದ್ದರಿಂದ ಅವರೂ ನಾಯಕಿಯನ್ನು ಸಮಾಧಾನ ಮಾಡಲು ಹೆಣಗಾಡಿದರು. ಇಡೀ ಹಾಡಿನ ಚಿತ್ರೀಕರಣವನ್ನು ಕೃತಕ ಬೀಚ್‌ನಲ್ಲಿ ಮುಗಿಸಿಕೊಂಡು ಬರುವಷ್ಟರಲ್ಲಿ ಸಾಕುಸಾಕಾಗಿ ಹೋಯಿತು.

ಹೇಳಿ ಕೇಳಿ ಸ್ಟಾರ್ ಅಲ್ಲದ ನಾಯಕ. ಹಾಸ್ಯಪಾತ್ರಗಳನ್ನು ಮಾಡಿ ಮಾಡಿ ಬೇಸತ್ತಿದ್ದ ನಂತರ ಕೈಗೆತ್ತಿಕೊಂಡಿದ್ದ ಸಿನಿಮಾ ಅದು. ಸಹಜವಾಗಿಯೇ ಅವರಿಗೆ ಆ ಸಿನಿಮಾ ಮೇಲೆ ಹೆಚ್ಚು ಪ್ರೀತಿ. ವಿದೇಶದಲ್ಲಿ ಚಿತ್ರೀಕರಿಸಿದ ಹಾಡೂ ಸೇರಿದಂತೆ ಕೆಲವು ಗೀತೆಗಳನ್ನು ತೋರಿಸಲು ಏರ್ಪಾಟು ಮಾಡಿದರು. ಅಷ್ಟರಲ್ಲಿ ನಾಯಕಿಯ ಕೈಗೆ ತಕ್ಷಣಕ್ಕೆ ಟವೆಲ್ ಸಿಗಲಿಲ್ಲ ಎಂಬ ಘಟನೆ ಸುದ್ದಿಯಾಗಿತ್ತು. ಆ ಹಾಡನ್ನು ಸುದ್ದಿಮಿತ್ರರಿಗೆ ತೋರಿಸಿದ ಸಂದರ್ಭದಲ್ಲಿ ನಾಯಕಿ ಅಲ್ಲಿ ಇರಲಿಲ್ಲ. ಒಂದಿಷ್ಟು ಕೆಣಕಲೆಂದು ಸಜ್ಜಾಗಿದ್ದವರು, ಪ್ರಶ್ನೆಗಳನ್ನು ನಾಯಕನತ್ತ ಎಸೆದರು. ಕೋಮಲ ಸ್ವಭಾವದ ನಾಯಕ ಸಾಧ್ಯವಾದಷ್ಟೂ ಯತ್ನಿಸಿ, ಅರ್ಥಪೂರ್ಣ ಉತ್ತರಕೊಟ್ಟರು. ಈಗ ಅದೇ ನಾಯಕಿ ಹಿಂದಿಯಲ್ಲಿ ಒಂದು ಸಿನಿಮಾ ಮಾಡಿದ್ದು ಸದ್ದೇ ಆಗಲಿಲ್ಲ. ಅವರ ಫೋನ್ ರಿಂಗಿಸಿದರೂ ಉತ್ತರ ಮಾತ್ರ ಬರುತ್ತಿಲ್ಲ.

**● ವಿಶಾಖ ಎನ್.**

Printed and Published by B. A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68